# ಅಪರೂಪದ ಹೂವು

ಮಹಾಮಸ್ತಕಾಭಿಷೇಕಕ್ಕೆ ಶ್ರವಣಬೆಳಗೊಳಕ್ಕೆ ಹೋಗಿದ್ದಾಗ ಚಂದ್ರಗಿರಿ ಏರಲು ಹೊರಟೆವು. ವಿಪರೀತ ಜನಸಂದಣಿ ಇದ್ದಿದ್ದರಿಂದ ಜಿನನಾಥಪುರದ ಕಡೆಯಿಂದ ಬಂಡೆಯೇರಿ ಬೆಟ್ಟ ಹತ್ತುವ ಸಾಹಸ ಮಾಡಿದೆವು. ನಮ್ಮ ಈ ದಾರಿ ಅತ್ಯಂತ ಸುಗಮವಾಗಿದ್ದು, ಆಹ್ಲಾದಕರವಾಗಿಯೂ ಇತ್ತು. ಆಗ ನಮ್ಮ ಕಣ್ಣಿಗೆ ಬಿದ್ದಿದ್ದು ಚೆಂಡಿನಾಕಾರದ ಹೂವು. ಅದರ ಚಿತ್ರವನ್ನು ನಮ್ಮ ಸ್ನೇಹಿತರಿಗೆ ಕಳಿಸಿದಾಗ ಅದರ ಸಂಪೂರ್ಣ ವಿವರ ಬಂತು. ಮೊಲನ ಕೋಡು ಎಂದು ಕರೆಯಲ್ಪಡುವ ಇದಕ್ಕೆ ಇಂಗ್ಲಿಷಿನಲ್ಲಿ **'Caralluma umbellata'** ಎನ್ನುವರು. ಇದನ್ನು ಮಧುಮೇಹಕ್ಕೆ ಔಷಧಿಯಾಗಿ ಬಳಸುವ ಯತ್ನಗಳು ನಡೆಯುತ್ತಿವೆ.

**-ರಾ.ಲ.ಜಗದೀಶ, ಮಂಡ್ಯ**





# ಬೆಣ್ಣೆ ನಂದಿ

ಶೃಂಗೇರಿ ಸಮೀಪದ ಕಿಗ್ಗಾದ ಋಷ್ಯಶೃಂಗೇಶ್ವರ ದೇವಸ್ಥಾನದಲ್ಲಿರುವ ಈ ನಂದಿ ಸದಾ ಕಾಲ ಬೆಣ್ಣೆಯಿಂದ ಲೇಪಿತವಾಗಿರುತ್ತದೆ. ಇದರ ಬಗ್ಗೆ ಅನೇಕ ಪುರಾಣ ಕಥೆಗಳಿವೆ. ಹಸುಗಳು ಅನೇಕ ವರ್ಷ ಗರ್ಭ ಕಟ್ಟದೆ ಬರಡು ಬಿದ್ದರೆ ಈ ನಂದಿಯಲ್ಲಿ ಪ್ರಾರ್ಥಿಸಿ ಬೆಣ್ಣೆ ಹಚ್ಚುವೆನೆಂದು ಬೇಡಿಕೊಂಡರೆ ಫಲ ನೀಡುತ್ತದೆ ಎಂದು ಕೆಲವರು ನಂಬುತ್ತಾರೆ. ಹರಕೆ, ನಂಬುಗೆ ಏನೇ ಇರಲಿ, ಇದನ್ನು ಬೆಣ್ಣೆ ನಂದಿ ಎಂದೇ ಹೇಳಬಹುದು.

**-ಮಾಧವಿಲತಾ ಚೆಪ್ಪಳಕಟ್ಟೆ, ಶಿವಮೊಗ್ಗ**

# ನಂದಿಯೊಂದಿಗೆ ಹನುಮ

ಐತಿಹಾಸಿಕ ಪ್ರಸಿದ್ಧ ಬನವಾಸಿಯಲ್ಲಿರುವ ಮಧುಕೇಶ್ವರ ದೇವಾಲಯದ ಪ್ರಾಂಗಣದಲ್ಲಿ ಅನೇಕ ಕುತೂಹಲಕಾರಿ ಶಿಲ್ಪಗಳಿವೆ. ಕೆಲವನ್ನು ಸೂಕ್ಷ್ಮವಾಗಿ ಗಮನಿಸಿದರೆ, ವಿಸ್ಮಯ ಮೂಡದೇ ಇರದು. ಈ ದೇವಾಲಯದ ಪಶ್ಚಿಮ ಭಾಗದಲ್ಲಿ ಅಮೃತ ಶಿಲೆಯಲ್ಲಿ ಕೆತ್ತಿರುವ ರಾಮ, ಲಕ್ಷ್ಮಣ, ಸೀತೆ ಮತ್ತು ಹನುಮ ದೇವರ ವಿಗ್ರಹಗಳಿವೆ. ರಾಮನ ಭಕ್ತ ಹನುಮಂತ ಇಲ್ಲಿಯೂ ರಾಮನ ಕಾಲಿನ ಬುಡದಲ್ಲಿ ನಿಂತ ಭಂಗಿಯಲ್ಲಿದ್ದಾನೆ. ಆದರೆ ವಿಶೇಷವೆಂದರೆ ಈ ಹನುಮ ನಂದಿಯ ಬೆನ್ನಿಗೆ ಒರಗಿ ನಿಂತಿದ್ದಾನೆ. ಹನುಮನಿಗೂ ನಂದಿಗೂ ಏನು ಸಂಬಂಧ ಎಂದು ಬನವಾಸಿಯ ಮಧುಕೇಶ್ವರ ದೇವಾಲಯದ ಮಾಜಿ ಮೊಕ್ತೇಸರರು ಅನೇಕ ಪ್ರಾಜ್ಞರನ್ನು ವಿಚಾರಿಸಿದ್ದಾರೆ. ಯಾರಿಂದಲೂ ಸಮರ್ಪಕ ಉತ್ತರ ದೊರೆತಿಲ್ಲವೆಂದು ಅವರು ಹೇಳುತ್ತಾರೆ. ಆದರೆ ಬನವಾಸಿಯ ಈ ಹನುಮ ಮಾತ್ರ ಶತ ಶತಮಾನಗಳಿಂದ ನಂದಿಯೊಂದಿಗೆ ಇದ್ದಾನೆಂಬುದು ಮಾತ್ರ ಸತ್ಯ.

**-ಬನವಾಸಿ ಕೃಷ್ಣಮೂರ್ತಿ, ಬೆಂಗಳೂರು**

